# ಸುದ್ದಿ ಸಂಚಯ

## ವಿವೇಕಾನಂದ ಬಾಲಕಸಂಘದ ಸುವರ್ಣ ಮಹೋತ್ಸವ

ಬೆಂಗಳೂರು ರಾಮಕೃಷ್ಣ ಮಠದಲ್ಲಿ ಕಳೆದ ೫೦ ವಸಂತಗಳಿಂದ ಸದ್ದುಗದ್ದಲವಿಲ್ಲದೆ ಬಾಲಕರ ಏಳಿಗೆಗಾಗಿ ಸೇವೆ ಸಲ್ಲಿಸುತ್ತಿರುವ ವಿವೇಕಾನಂದ ಬಾಲಕಸಂಘ ಇದೇ ಮೇ ೩೦, ೩೧ ಹಾಗೂ ಜೂನ್ ೧ರಂದು —ಮೂರುದಿನಗಳ ಕಾಲ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು. ಸಂಘದ ಹಿಂದಿನ ಅನೇಕ ಸದಸ್ಯರು, ಬಾಲಕ ಸಂಘದಿಂದ ಮೂಡಿ ಬಂದ ರಾಮಕೃಷ್ಣ ಮಠದ ಸಾಧುಗಳು, ಸಂಘಕ್ಕೆ ಮಾರ್ಗದರ್ಶನ ನೀಡಿದ ಗುರುಹಿರಿಯರು ಈ ಮೂರುದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೇ ೩೦ರಂದು ಬೆಂಗಳೂರು ರಾಮಕೃಷ್ಣ ಮಠದ ಆವರಣದಲ್ಲಿ ಆರಂಭಗೊಂಡ ಈ ಕಾರ್ಯಕ್ರಮದ ಉದ್ಘಾಟನೆಯನ್ನು ನಡೆಸಿಕೊಟ್ಟವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳೂ ಹಾಗೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಸ್ವಾಮಿ ಗೌತಮಾನಂದಜಿಯವರು. ಅಂದು ಸಂಜೆ ಜ್ಯೋತಿ ಬೆಳಗುವುದರ ಮೂಲಕ ವಿವೇಕಾನಂದ ಬಾಲಕ ಸಂಘದ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿದ ಪೂಜ್ಯ ಸ್ವಾಮೀಜಿಯವರು ಶೀಲ ನಿರ್ಮಾಣದಲ್ಲಿ ಸಂಘದ ಕಾಣಿಕೆಯನ್ನು ಸ್ಮರಿಸುತ್ತಾ ದೇಶಾದ್ಯಂತ ಬಾಲಕಸಂಘದಂತಹ ಸಂಸ್ಥೆಗಳು ಹುಟ್ಟಿ ಚಾರಿತ್ರ್ಯನಿರ್ಮಾಣ ಕಾರ್ಯದಲ್ಲಿ ತೊಡಗಲಿ ಎಂದು ಆಶಿಸಿದರು. ಈ ಮುಂಚೆ ಬಾಲಕಸಂಘದ ಚರಿತ್ರೆಯನ್ನು ನೆನಪಿಸುವಂತಿದ್ದ ಬಾಲಕರೇ ಸಿದ್ಧಪಡಿಸಿದ್ದ ಚಿತ್ರಪ್ರದರ್ಶನವನ್ನೂ ಸಹ ಉದ್ಘಾಟಿಸಲಾಗಿತ್ತು. ಈ ಸುವರ್ಣ ಮಹೋತ್ಸವದ ಸ್ಮರಣಸಂಚಿಕೆ ವಿವೇಕ ಮಂಜೂಷಾ ಪತ್ರಿಕೆಯನ್ನೂ ಪೂಜ್ಯ ಸ್ವಾಮೀಜಿಯವರು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಸಂಘದ ಉದ್ದಿಶ್ಯ, ಕಾರ್ಯಪ್ರಣಾಳಿ, ಚರಿತ್ರೆ ಹಾಗೂ ಬೆಳವಣಿಗೆಗಳನ್ನು ಬಿಂಬಿಸುವ Vivekananda Balaka Sangha– A Perspective ಎಂಬ ವಿಡಿಯೋ ಸಿ.ಡಿ.ಯನ್ನು ಬಿಡುಗಡೆ ಮಾಡಲಾಯಿತು.



*ಸ್ಮರಣಸಂಚಿಕೆ ವಿವೇಕ ಮಂಜೂಷಾವನ್ನು ಬಿಡುಗಡೆ ಮಾಡುತ್ತಿರುವ ಸ್ವಾಮಿ ಗೌತಮಾನಂದಜಿಯವರು,, ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿಯವರು ಪಕ್ಕದಲ್ಲಿದ್ದಾರೆ.*

ಸುವರ್ಣ ಮಹೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳಲ್ಲಿ ಆಧ್ಯಾತ್ಮಿಕ ಶಿಬಿರ, ಬಾಲಕಸಂಘದ ಬೆಳವಣಿಗೆಗಾಗಿ ಶ್ರಮಿಸಿದವರೆಲ್ಲರಿಗೂ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದುವೂ ಇದ್ದವು.

ಒಟ್ಟಿನಲ್ಲಿ ಮೂರುದಿನಗಳ ಕಾಲ ಸಂಭ್ರಮದ ಆನಂದಕರವಾದ ವಾತಾವರಣವನ್ನು ಸೃಷ್ಟಿಸಿದ ಈ ಸುವರ್ಣ ಮಹೋತ್ಸವದಲ್ಲಿ ದೇಶದ ವಿವಿಧ ಎಡೆಗಳಿಂದ ಆಗಮಿಸಿದ್ದ ರಾಮಕೃಷ್ಣ ಮಠದ ಸಾಧುಗಳೂ, ಸಂಘದ ಹಿರಿಯ ಸದಸ್ಯರೂ, ಭಕ್ತರೂ ಪಾಲ್ಗೊಂಡು ಸಂತಸಪಟ್ಟರು. ✵

---

### ಇಂಟರ್‌ನೆಟ್ ನಕ್ಷೆಯಲ್ಲಿ ಲಕ್ನೊ ವಿವೇಕಾನಂದ ಪಾಲಿಕ್ಲಿನಿಕ್

೧೬ನೇ ಮೇ ೨೦೦೩ರಿಂದ ಗಂಭೀರ ವೈದ್ಯಕೀಯ ಚಿಕಿತ್ಸೆಯ ಸೇವೆಗಳಿಗಾಗಿ ಲಕ್ನೊ ರಾಮಕೃಷ್ಣ ಮಿಷನ್ನಿನ ವಿವೇಕಾನಂದ ಪಾಲಿಕ್ಲಿನಿಕ್ ಅನ್ನು ಇಂಟರ್‌ನೆಟ್ ನಕ್ಷೆಯಲ್ಲಿ ಸೇರಿಸಲಾಗಿದೆ. ಈಗಾಗಲೇ ೧೨ ಹಾಸಿಗೆಗಳ ಐ.ಸಿ.ಯು ಹಾಗೂ ೧೨ ಹಾಸಿಗೆಗಳ ಎನ್.ಐ.ಸಿ.ಯು ಇರುವ ವಿವೇಕಾನಂದ ಪಾಲಿಕ್ಲಿನಿಕ್‌ನ್ನು ಭಾರತದ ಗಂಭೀರ ವೈದ್ಯಕೀಯ ಚಿಕಿತ್ಸೆಯ ಪ್ರತಿಷ್ಠಾನದಿಂದ ಭಾವೀ ಸಿಬ್ಬಂದಿಗಳ ತರಬೇತಿಯ ಸಮರ್ಥ ಕೇಂದ್ರವೆಂದು ಪರಿಗಣಿಸಲಾಗಿದೆ. ಈ ಪಾಲಿಕ್ಲಿನಿಕ್‌ನಲ್ಲಿ ಗಂಭೀರ ವೈದ್ಯಕೀಯ ಚಿಕಿತ್ಸೆಯ ಕುರಿತು ಮೂರು ದಿನಗಳ ಕಾರ್ಯಾಗಾರ ಮತ್ತು ವಿಚಾರಗೋಷ್ಠಿಯನ್ನು ನಡೆಸಲಾಯಿತು. ಇದರಲ್ಲಿ ದೇಶದ ಎಲ್ಲೆಡೆಯಿಂದಲೂ ೨೦ ವಿಶೇಷ ತಜ್ಞ ಮುಂದಾಳುಗಳು ವೈವಿಧ್ಯಮಯವಾದ ಪ್ರಸಕ್ತ ವಿಷಯಗಳನ್ನು ಕುರಿತು ವಿಚಾರಗಳನ್ನು ಪ್ರಸ್ತುತಪಡಿಸಿದರು.

### ಅಖಿಲ ಕೇರಳ ರಾಮಕೃಷ್ಣ ಭಕ್ತ ಸಮ್ಮೇಳನ

ಕೇರಳ ರಾಜ್ಯದ ಮಾವೇಲಿಕರ ಎಂಬ ಊರಿನಲ್ಲಿ ಎರಡನೆಯ ಅಖಿಲ ಕೇರಳ ರಾಮಕೃಷ್ಣ ಭಕ್ತ ಸಮ್ಮೇಳನವು ತುಂಬು ಉತ್ಸಾಹದಿಂದ ನೆರವೇರಿತು. ಮೇ ೯,೧೦ ಮತ್ತು ೧೧ ಈ ಮೂರುದಿನಗಳ ಭಕ್ತ ಸಮ್ಮೇಳನದಲ್ಲಿ ಸುಮಾರು ೫೦೦ ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ರಾಮಕೃಷ್ಣ ಮಹಾಸಂಘದ ವಿವಿಧ ಕೇಂದ್ರಗಳಿಂದ ಬಂದ ಸಂನ್ಯಾಸಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಂಘದ ಟ್ರಸ್ಟಿಗಳೂ ಚೈನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಪೂಜ್ಯ ಸ್ವಾಮಿ ಗೌತಮಾನಂದಜಿಯವರ ನೇತೃತ್ವದಲ್ಲಿ ಸಮ್ಮೇಳನವು ನಡೆಯಿತು. ಅದೇ ಊರಿನಲ್ಲಿ ಶ್ರೀರಾಮಕೃಷ್ಣ ವಿದ್ಯಾಲಯ ಎಂಬ ಶಾಲೆಯನ್ನು ನಡೆಸುತ್ತಿರುವ ಶ್ರೀ ನರೇಂದ್ರ ಪ್ರಸಾದ್ ಅವರು ಈ ಸಮ್ಮೇಳನದ ಮುಖ್ಯ ಆಯೋಜಕರು. ಭಜನೆ, ಉಪನ್ಯಾಸ ಮತ್ತು ಸಾಂಸ್ಕೃತಿತ ಕಾರ್ಯಕ್ರಮಗಳು ಸಮ್ಮೇಳನದ ಮುಖ್ಯ ಅಂಶಗಳಾಗಿದ್ದವು. ✵